UNIVERSITY OF AGRICULTURAL SCIENCES, DHARWAD

ICAR - KRISHI VIGYAN KENDRA

SAIDAPUR FARM, DHARWAD -580 005

Newsletter

Volume: 11 Issue: 1 January-March 2015

## Training programme on “Lac cultivation”







Krishi Vigyan Kendra, Saidapur Farm, Department of Agril. Entomology, College of Agriculture, University of Agricultural Sciences, Dharwad and Kadamba Charitable Foundation, Sirsi jointly organized training programme on “Lac Cultivation” for the farmers of Belagavi and Dharwad on January 12, 2015 at KVK, Dharwad. Shri Anant Kumar Hegde, Hon'ble MP, Uttara Kannada district inaugurated the programme by watering the saplings of *Flemingia semialata* and explained the milestones of lac cultivation in north Karnataka. In the near future, utility of lac in food and medicine is going to be increased and the lac cultivation is going to create revolution and suggested the farmers to adopt this new technology of lac cultivation as profitable venture. Dr. D. P. Biradar, Hon'ble Vice-Chancellor, UAS, Dharwad and President of the function expressed that lac cultivation is a new venture suitable for dryland agriculture of north Karnataka. Farmers should utilize the available facilities and cultivate lac as an alternative for major commercial crops in this area. Dr. V. I. Benagi, Director of Extension, Dr. B. M. Khadi, Director of Research, Dr. A.R. Alagawadi, Dean(Agri.), Dr. S. L. Madiwalar, Dean(Forestry) and Dr. K.V. Natikar, Associate Director of Extension, UAS, Dharwad were the Chief Guests of the function. Folder on lac cultivation was released on the occasion. During the training programme Dr. R. R. Patil, Professor and Head, Dept. of Agril. Entomology and Dr. Javaregouda, Professor of Entomology delivered lectures on lac cultivation on different tree species in north Karnataka and management of lac cultivation with *Flemingia semialata.* Shri Ramesh Jigaler, successful lac cultivation farmer of Pala shared his experiences with the participants. Initially Dr. R. R. Patil welcomed the gathering, Dr. S. M. Hiremath, SMS (Horticulture) compeered and Dr. S. M. Mantur, Programme Co-ordinator, Krishi Vigyan Kendra, Dharwad proposed vote of thanks. More than 60 farmers from Belagavi and Dharwad districts participated in the training programme.

## Training programme on “Protection of Plant Varieties and Farmers' Rights Act”







Krishi Vigyan Kendra, University of Agricultural Sciences, Dharwad in collaboration with Protection of Plant Varieties and Farmers' Rights Authority, New Delhi organized Capacity building training programme for farmers and stakeholders of Dharwad district on “Protection of Plant Varieties and Farmers' Rights Act” on January 30, 2015 at KVK, Dharwad. Dr. H. S. Vijaykumar, Director of Education, UAS, Dharwad and Chief Guest for the function, inaugurated the programme by watering the sapling and said that scientits and farmers are equally responsible for protetion and maintainance of plant varieties. The PPVFRA 2001 has passed this act for protection of plant varieties. Hence, he suggested the farming community to organize and avail the facilities of the authority in large proportion. Dr. N. K. Biradarpatil, Special Officer (Seeds), UAS, Dharwad enlightened the farmers on objectives and importance of registration of plant varieties. During the occasion, technical bulletin and a leaflet pertaining to Protection of Plant Varieties and Farmers' Rights Act 2001 was released by the dignitaries. Dr. V. I. Benagi, Director of Extension, UAS, Dharwad and President of the function expressed that farmers need to have an urge on their rights at national level. Innovations in agriculture is being done since ancient times and protection of these innovations is essential in this commercial era. Hence, the farmers should register their varieties under this act and bring laurels to the state. Shri. Shankar H. Langati, Shri. Rajashekhargouda G. Patil, Chairman, Shri Rajaganga Raitakuta, Soorashettikoppa, Shri J. K. Kamble were also present during the occassion. Aspects of importance of Protection of Plant Varieties and Farmers' Rights Act, procedures for registration of farmers varieties in PPVFRA, protection and preservation of endangered local or native varieties of minor millets and paddy etc., were discussed by Dr. N. K. Biradarpatil, Special Officer (Seeds), Dr. (Smt.) Suma Mogali, Scientist, AICRP on MULLARP, UAS, Dharwad, Shri Shankar Hanumanth Langati, Shri. Channabasappa Kombali, Shri Rajashekhargouda G. Patil and Shri Shenik Raj. During the programme an exhibition of native plant varieties was also arranged. Dr. S. M. Mantur, Programme Co-ordinator, Krishi Vigyan Kendra, Dharwad welcomed the gathering and made introductory remarks. More than 150 farmers of Dharwad district participated in the training programme.



## Field Day on Onion (var. Bhima Super) Seed Production







Krishi Vigyan Kendra, Saidapur farm in collaboration with the Directorate of Extension, UAS, Dharwad under Rashriya Krishi Vikas Yojane organized field Day cum training on Onion Seed Production for the onion growers of Dharwad district at KVK, Dharwad on March 10, 2015. Dr. B. N. Patil, Associate Director of Research, UAS, Dharwad and Chief Guest of the function inaugurated the field day and suggested the farmers to adopt UAS, Dharwad technologies in consultation with scientists and pay attention on importance of soil and water conservation. Dr. K.V. Natikar, Associate Director of Extension, expressed that the farmers have to avail information of modern technologies through ToT centres and take up agriculture based allied activities to enhance the productivity. Dr. P. R. Dharmatti, Professor of Horticulture, enlightened the farmers on improved cultivation practices of onion. Dr. N. K. Biradarpatil, Special Officer(Seeds) and President of the function highlighted seed production as an entrepreneurial activity. He suggested farmers to stay tuned with agriculture and take up seed production in collaboration with UAS, Dharwad to gain more profits. Dr. S. M. Mantur, Programme Co-ordinator, made introductory remarks and welcomed the gathering and Dr. Uma N. Kulkarni proposed vote of thanks. More than 150 farmers, farm women and students participated in the field day.

## Farm Machinery Exhibition







The Directorate of Extension and Krishi Vigyan Kendra, UAS, Dharwad under Rashtriya Krishi Vikas Yojane organized one day Farm Machinery Exhibition at KVK, Dharwad on March 25, 2015. Dr. B. M. Khadi, Director of Research inaugurated the exhibition and visited the different stalls. Dr. V. I. Benagi, Director of Extension, Dr. A. R. Alagawadi, Dean (Agri.), College of Agriculture, Dharwad and Dr. K. V. Natikar, Associate Director of Extension, UAS, Dharwad were the Chief Guests of the function. A total of 18 different farm machinery manufacturers and distributors participated and exhibited the agricultural equipments. Laser leveler, rotovator, drudgery reducing equipments, different types of cycle weeder, plough, harrow, seed drill, envirofit chulha, millet processing unit, maize sheller etc., were exhibited to the farmers. The demonstration of laser based land leveling machinery was the key attraction of the exhibition. More than 600 farmers, farm women and students from Dharwad, Gadag, Belagavi and Haveri districts participated in the exhibition. Dr. S. M. Mantur, Programme Co-ordinator along with staff of Krishi Vigyan Kendra, Dharwad organized this exhibition.

## Prime Minister's "Mann Ki Baat" Radio programme and progressive farmers-scientists interaction





A forum for Dharwad district farmers and farm women was arranged at KVK, Saidapur Farm, UAS, Dharwad to listen the Hon'ble Prime Minister Shri Narendra Modiji address to farmers under 6th edition of "Mann Ki Baat" radio programme on March 22, 2015 at 11.00 am. The programme was witnessed by more than 60 farmers in presence of UAS, Dharwad officials. The programme had encouraging response from the farmers of Dharwad district. The awareness programme created by KVK, Dharwad was broadcasted on Doordarshan Chandana channel. Dr. V. I. Benagi, Director of Extension and Scientists of KVK had interaction with the farmers. Doordarshan representative Shri Bilagi was present during the occasion.



# Trainings



On campus training on income generation activities was organized at KVK, Dharwad on January 13, 2015 for the women SHG members of BDSS, NGO, Dharwad. During the programme, scientists from Rural Home Science College discussed various income generation activities under the departments of Food and Nutrition, Family Resource Management, Human Development, Textile and Apparel Designing. Dr. Renuka Salunke, Professor and Head and Dr. Geeta Chitagubbi, Senior Scientist, AICRP (FRM), UAS, Dharwad demonstrated preparation of detergent powder and phenyl. Dr. Uma N. Kulkarni, SMS (Home Science) explained processing, value addition, packaging and labeling of food products. A total of 25 SHG women participated and were benefited.



Off campus training on Integrated Crop Management in bengalgram was organized on January 10, 2015 at farmers plots of Mulamuttala village under front line demonstration. Dr. S. M. Hiremath, SMS (Horticulture) discussed about new variety JG-11, while Dr. K. P. Gundannavar, SMS (Ag. Entomology) highlighted on importance of seed treatment and integrated management of pod borer in bengalgram.

# Educational Tour to Farmers








Under Rashtriya Krishi Vikas Yojane, educational tour to Maharashtra state was organized for the selected 10 progressive farmers of Dharwad district from February 10-19, 2015. Various Agriculture Universities, Krishi Vigyan Kendras/Research Stations, Jain Irrigation System, Jalagoan, Onion Storage Units, Progressive Farmers Fields and Research plots of ICAR Complex, Goa were visited and were updated with innovative technologies. Mr. C. J. Kumar, Farm Manager, KVK, Dharwad headed the farmers educational tour.

# Participation in Krishi Mela





Dr. K. P. Gundannavar, SMS (Ag. Entomology), KVK, Dharwad and Shri S. G. Bhuti, Assistant Professor, AEEC, Dharwad participated in the Krishi Mela organized by the KVK, Suttur from January 17-22, 2015 and showcased the farmers' friendly sustainable technologies of UAS, Dharwad.

# Best Poster Presentation Award



Dr. S.M. Mantur, Professor of Horticulture and Programme Co-ordinator, KVK, Dharwad received Best Poster Presentation Award for the research paper entitled "Influence of growing environments and spacing on growth and yield of broccoli (*Brassica oleraceae var italica*)" in the National Seminar on "Hi-Tech Horticulture for Enhancing Productivity, Quality and Rural Prosperity" held at ICAR-NRCSS, Ajmer, Rajasthan from January 19-20, 2015. Dr. Mantur Co-chaired a session and presented a lead paper on Protected Cultivation and status of Hi-Tech Horticulture Project in UAS, Dharwad.

# Best Pbulication Award



Dr. Uma N. Kulkarni, SMS (Home Sci.), KVK, Dharwad received Best Publication Award - 2014 instituted by Dr. Y. S. Parmer University of Horticulture and Forestry, Nauni, Solan, Himachal Pradesh for the textbook entitled Food Technology Part-I published by Manipal Global Education Services, Manipal on February 28, 2015.





## VIPs visits to KVK Demonstration Units and Discussion with Scientists



Poojya swamiji of Shri Raja Rajeshwari Math, Bengaluru visited KVK, Dharwad on January 31, 2015. Dr. A.R. Alagawadi, Dean(Agri.) was present on the occasion.



Dr. D. Rajagopal and Dr. Yogiraj B. Patil, Hon'ble Member, Board of Management visited KVK, Dharwad on February 9, 2015.



Dr. James Scott, Director and Scientist, International Center, University of Missouri, USA visited KVK, Dharwad on March 31, 2015.





Dr. J. V. Patil, Director and Dr. Vilas A. Tonapi, Principal Scientist, Indian Institute of Millets Research, Hyderabad visited the sorghum demonstration plots at Neerasagar and Linganakoppa, Tq: Kalaghatagi on February 13, 2015 and discussed with farmers.

## Demonstration of Fish Farming in Farm Pond





The fish harvesting programme at demonstration unit of KVK farm pond was launched by Dr. V. I. Benagi, Director of Extension and Dr. K. V. Natikar, Associate Director of Extension, UAS, Dharwad on January 16, 2015. Dr. K.V. Basavakumar, Professor (Fisheries), UAS, Dharwad highlighted the scientific method of fish farming in farm pond to the farmers and farm women.


**Editor & Publisher** : **Dr. S. M. Mantur**
Programme Co-ordinator, ICAR-Krishi Vigyan Kendra, Dharwad

**Associate Editors** : **Dr. K. P. Gundannavar**, **Dr. S. M. Hiremath**, **Dr. Uma N. Kulkarni**, **Smt. Shailaja N. Galagali**, **Shri C. J. Kumar**

**Type Setting and Design** : **Shri. Ulavappa Shivoji**
DTP Unit, Publicattion Center, UAS, Dharwad



From,
Programme Co-ordinator
ICAR - Krishi Vigyan Kendra, Saidapur Farm
Dharwad 580 005 (Karnataka)
Telephone : 0836-2444272
E-mail : pc_kvkd@rediffmail.com
Website : www.kvkdharwad.org
Mobile : 94484 95342


To,

Book Post

For free kisan mobile advisory services, please call 0836-2444272 / visit www.kvkdharwad.org for registration



# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ: 11 | ಸಂಚಿಕೆ: 1 | ಜನವರಿ-ಮಾರ್ಚ 2015


## "ಅರಗು ಕೃಷಿ" ಕುರಿತು ತರಬೇತಿ





ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮಹಾವಿದ್ಯಾಲಯದ ಕೃಷಿ ಕೀಟಶಾಸ್ತ್ರ ವಿಭಾಗ ಹಾಗೂ ಶಿರಸಿಯ ಕದಂಬ ಚಾರಿಟೇಬಲ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಯ ರೈತರಿಗೆ "ಅರಗು ಕೃಷಿ" ಕುರಿತು ತರಬೇತಿಯನ್ನು ಜನವರಿ 12, 2015 ರಂದು ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆ ಸಂಸದರಾದ ಶ್ರೀ ಅನಂತಕುಮಾರ ಹೆಗಡೆಯವರು ಫ್ಲೆಮಿಂಜಿಯಾ ಸೆಮಿಅಲಾಟಾ ಸಸಿಗಳಿಗೆ ನೀರು ಹನಿಸುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತ ಉತ್ತರ ಕರ್ನಾಟಕದಲ್ಲಿ ಅರಗು ಕೃಷಿ ನಡೆದುಬಂದ ಹಾದಿಯನ್ನು ವಿವರಿಸಿದರು. ಇತ್ತೀಚಿಗೆ ಆಹಾರ ಹಾಗೂ ವೈದ್ಯಕೀಯ ತಂತ್ರಜ್ಞಾನದಲ್ಲಿ ಅರಗಿನ ಉತ್ಪನ್ನಗಳ ಬಳಕೆಯು ಗಣನೀಯವಾಗಿ ಹೆಚ್ಚುತ್ತಲಿದ್ದು ಬೇಡಿಕೆಗೆ ಅನುಗುಣವಾಗಿ ರೈತರು ಈ ಹೊಸ ಬೆಳೆಯನ್ನು ಲಾಭದಾಯಕ ಕೃಷಿಯಾಗಿ ಅಳವಡಿಸಿಕೊಳ್ಳಲು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಮಾತನಾಡುತ್ತ ಉತ್ತರ ಕರ್ನಾಟಕದ ಒಣ ಬೇಸಾಯದ ಪ್ರಮುಖ ಬೆಳೆಗಳಿಗೆ ಪರ್ಯಾಯವಾಗಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಅರಗು ಕೃಷಿಯ ಲಾಭಪಡೆಯುವಂತೆ ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ. ವಿ. ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಡಾ. ಬಿ. ಎಮ್. ಖಾದಿ ಸಂಶೋಧನಾ ನಿರ್ದೇಶಕರು, ಡಾ. ಎ. ಆರ್. ಅಳಗವಾಡಿ, ಡೀನ್(ಕೃಷಿ) ಹಾಗೂ ಡಾ. ಎಸ್. ಎಲ್. ಮಡಿವಾಳರ, ಡೀನ್(ಅರಣ್ಯ) ಹಾಗೂ ವಿಸ್ತರಣಾ ಸಹ ನಿರ್ದೇಶಕರಾದ ಡಾ. ಕೆ. ವಿ. ನಾಟಿಕರ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಅರಗು ಕೃಷಿ ಕುರಿತು ಹಸ್ತ ಪ್ರತಿ ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಕೃಷಿ ಮಹಾವಿದ್ಯಾಲಯದ ಕೀಟಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಆರ್. ಪಾಟೀಲ, ಉತ್ತರ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಲಭ್ಯವಾಗಿರುವ ಸಸ್ಯಗಳ ಮೇಲೆ ಅರಗು ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಶಿರಸಿಯ ಅರಣ್ಯ ಮಹಾವಿದ್ಯಾಲಯದ ಕೀಟಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಜವರೇಗೌಡ, ಅರಗು ಕೃಷಿ ಬೇಸಾಯವನ್ನು ಫ್ಲೆಮಿಂಜಿಯಾ ಸೆಮಿಅಲಾಟಾ ಬಳಸಿ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಪಾಳ ಗ್ರಾಮದ ಪ್ರಗತಿಪರ ರೈತ ಹಾಗೂ ಯಶಸ್ವಿ ಅರಗು ಕೃಷಿ ಬೆಳೆಗಾರರಾದ ಶ್ರೀ ರಮೇಶ ಜಿಗಳೇರ ತಮ್ಮ ಅರಗು ಕೃಷಿ ಅನುಭವಗಳನ್ನು ರೈತರೊಂದಿಗೆ ಹಂಚಿಕೊಂಡರು. ಕೃಷಿ ಮಹಾವಿದ್ಯಾಲಯದ ಡಾ. ಆರ್. ಆರ್. ಪಾಟೀಲ ಸ್ವಾಗತಿಸಿ, ಕೇಂದ್ರದ ಡಾ. ಎಸ್. ಎಮ್. ಹಿರೇಮಠ ಕಾರ್ಯಕ್ರಮ ನಿರೂಪಿಸಿದರು ಹಾಗೂ ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ವಂದಿಸಿದರು. ಸದರಿ ಕಾರ್ಯಾಗಾರದಲ್ಲಿ 60 ಕ್ಕೂ ಹೆಚ್ಚು ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಯ ರೈತರು ಭಾಗವಹಿಸಿದ್ದರು.

## "ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯ ಜಾಗೃತಿ ತರಬೇತಿ ಕಾರ್ಯಕ್ರಮ"





ಕೃಷಿ ವಿಜ್ಞಾನ ಕೇಂದ್ರ ಹಾಗೂ ನವದೆಹಲಿಯ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ ಇವರ ಸಂಯುಕ್ತ ಆಶ್ರಯದಲ್ಲಿ ಧಾರವಾಡ ಜಿಲ್ಲೆಯ ಸಸ್ಯತಳಿ ಸಂರಕ್ಷಣೆಯಲ್ಲಿ ಪಾಲ್ಗೊಂಡ ರೈತ ಹಾಗೂ ಪಾಲುದಾರರ ಸಾಮರ್ಥ್ಯ ವೃದ್ಧಿಸಲು ಜನವರಿ 30, 2015 ರಂದು "ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯ ಜಾಗೃತಿ" ಕುರಿತು ತರಬೇತಿ ಕಾರ್ಯಕ್ರಮವನ್ನು ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿತ್ತು. ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಎಚ್. ಎಸ್. ವಿಜಯಕುಮಾರರವರು ಸಸಿಗೆ ನೀರು ಹನಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಸಸ್ಯ ತಳಿ ಒಡೆತನ ಹಾಗೂ ಅವುಗಳ ಅಭಿವೃದ್ಧಿ ಪಡಿಸುವಿಕೆಯ ಹಕ್ಕಿಗೆ ವಿಜ್ಞಾನಿಗಳು-ರೈತರು ಸಮಭಾಗಿಗಳು. ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರವು 2001 ರಲ್ಲಿ ತಳಿ ಸಂರಕ್ಷಣೆಗಾಗಿ ಈ ಕಾಯ್ದೆಯನ್ನು ಪ್ರತಿಪಾದಿಸಿದೆ. ಆದ್ದರಿಂದ ರೈತ ಸಮುದಾಯವು ಎಚ್ಚೆತ್ತುಕೊಂಡು ಸಂಘಟನೆಗಳನ್ನು ರಚಿಸಿ ಹೆಚ್ಚಿನ ಪ್ರಮಾಣದಲ್ಲಿ ಈ ಕಾಯ್ದೆಯ ಉಪಯುಕ್ತತೆ ಪಡೆಯಲು ಸಲಹೆ ನೀಡಿದರು. ಮುಖ್ಯ ಅತಿಥಿಗಳಾಗಿ ಬೀಜ ಘಟಕದ ವಿಶೇಷ ಅಧಿಕಾರಿಗಳಾದ ಡಾ. ಎನ್. ಕೆ. ಬಿರಾದಾರಪಾಟೀಲ ಇವರು ಪ್ರಾಧಿಕಾರದ ಸ್ಥಾಪನೆ, ಉದ್ದೇಶ ಹಾಗೂ ನೋಂದಣಿ ಕುರಿತಂತೆ ರೈತರಿಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ ಕುರಿತಂತೆ ಪುಸ್ತಕ ಹಾಗೂ ಹಸ್ತ ಪ್ರತಿ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಸ್ತರಣಾ ನಿರ್ದೇಶಕರಾದ ಡಾ. ವಿ. ಐ. ಬೆಣಗಿಯವರು ವಹಿಸಿ ಮಾತನಾಡುತ್ತ ರಾಷ್ಟ್ರ ಮಟ್ಟದಲ್ಲಿ ರೈತರ ಹಕ್ಕುಗಳ ಅವಶ್ಯಕತೆ ಕುರಿತು ಮಾಹಿತಿ ಅತ್ಯಗತ್ಯ ಹಾಗೂ ಅನಾದಿ ಕಾಲದಿಂದಲೂ ಕೃಷಿಯಲ್ಲಿ ಆವಿಷ್ಕಾರಗಳು ನಡೆಯುತ್ತ ಬಂದಿದ್ದು ಇವುಗಳ ಸಂರಕ್ಷಣೆ ಇಂದಿನ ವ್ಯಾಪಾರಿಕರಣ ಯುಗದಲ್ಲಿ ಅತ್ಯವಶ್ಯ. ಕಾರಣ ಈ ಕಾಯ್ದೆಯ ಅಡಿಯಲ್ಲಿ ರೈತರು ತಮ್ಮ ತಳಿಯನ್ನು ನೋಂದಾಯಿಸಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಲು ಕರೆ ನೀಡಿದರು. ಅತಿಥಿಗಳಾಗಿ ಶ್ರೀ. ಶಂಕರ ಲಂಗಟಿ, ಸೂರಶೆಟ್ಟಿಕೊಪ್ಪ ಗ್ರಾಮದ ಶ್ರೀ ರಾಜಗಂಗಾ ರೈತ ಕೂಟದ ಕಾರ್ಯಾಧ್ಯಕ್ಷರಾದ ಶ್ರೀ. ರಾಜಶೇಖರಗೌಡ ಪಾಟೀಲ ಹಾಗೂ ಪ್ರೋತ್ಸಾಹಕರಾದ ಶ್ರೀ. ಜೆ. ಕೆ. ಕಾಂಬಳೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ತರಬೇತಿಯಲ್ಲಿ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ, ಸಸ್ಯ ತಳಿಗಳ ನೋಂದಣಿ ಮಾಹಿತಿ, ಅಳಿವಿನ ಅಂಚಿನಲ್ಲಿರುವ ತಳಿಗಳ ಸಂರಕ್ಷಣೆ ಹಾಗೂ ಸಿರಿಧಾನ್ಯ ಮತ್ತು ದೇಶಿ ಬೀಜಗಳ ಸಂರಕ್ಷಣೆ ಕುರಿತಂತೆ ಡಾ. ಎನ್. ಕೆ. ಬಿರಾದಾರಪಾಟೀಲ, ಡಾ. ಸುಮಾ ಮುಗಳಿ, ಶ್ರೀ. ಶಂಕರ ಲಂಗಟಿ, ಶ್ರೀ. ಚನಬಸಪ್ಪ ಕೊಂಬಳಿ, ಶ್ರೀ. ಶೇಣಿಕರಾಜ ಹಾಗೂ ಶ್ರೀ. ರಾಜಶೇಖರಗೌಡ ಪಾಟೀಲ ರೈತರೊಂದಿಗೆ ಮಾಹಿತಿ ಹಂಚಿಕೊಂಡರು. ತರಬೇತಿಯಲ್ಲಿ ವಿವಿಧ ಬೆಳೆ-ತಳಿ-ಬೀಜಗಳ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ತರಬೇತಿಯ ಪ್ರಾರಂಭದಲ್ಲಿ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಮ್. ಮಂಟೂರ ಎಲ್ಲರನ್ನೂ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸದರಿ ತರಬೇತಿಯಲ್ಲಿ 150 ಕ್ಕೂ ಹೆಚ್ಚು ಧಾರವಾಡ ಜಿಲ್ಲೆಯ ರೈತರು ಭಾಗವಹಿಸಿದ್ದರು.





## ಈರುಳ್ಳಿ (ಭೀಮಾ ಸುಪರ) ಬೀಜೋತ್ಪಾದನೆ ಕ್ಷೇತ್ರೋತ್ಸವ





ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಿಲ್ಲೆಯ ಈರುಳ್ಳಿ ಬೆಳೆಗಾರರಿಗೆ "ಈರುಳ್ಳಿ ಬೀಜೋತ್ಪಾದನೆ" ಕುರಿತು ಕ್ಷೇತ್ರೋತ್ಸವ ಹಾಗೂ ತರಬೇತಿಯನ್ನು ಮಾರ್ಚ 10, 2015 ರಂದು ಕೇಂದ್ರದ ಈರುಳ್ಳಿ ಬೀಜೋತ್ಪಾದನೆ ಕ್ಷೇತ್ರದಲ್ಲಿ ಆಯೋಜಿಸಿತ್ತು. ವಿಶ್ವವಿದ್ಯಾಲಯದ ಸಂಶೋಧನಾ ಸಹ ನಿರ್ದೇಶಕರಾದ ಡಾ. ಬಿ. ಎನ್. ಪಾಟೀಲ ಅವರು ಸಸಿಗೆ ನೀರು ಹನಿಸುವುದರ ಮೂಲಕ ಕ್ಷೇತ್ರೋತ್ಸವವನ್ನು ಉದ್ಘಾಟಿಸಿ ಕೃಷಿ ವಿಶ್ವವಿದ್ಯಾಲಯದ ಸಂಶೋಧನೆಗಳನ್ನು ವಿಜ್ಞಾನಿಗಳ ಸಂಪರ್ಕದೊಂದಿಗೆ ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಮಣ್ಣು ಮತ್ತು ನೀರು ಸಂರಕ್ಷಣೆಗೆ ಹೆಚ್ಚು ಗಮನ ನೀಡುವಂತೆ ಕರೆ ನೀಡಿದರು. ವಿಸ್ತರಣಾ ಸಹ ನಿರ್ದೇಶಕರಾದ ಡಾ. ಕೆ. ವಿ. ನಾಟಿಕರ ಮಾತನಾಡಿ ರೈತರು ತಾಂತ್ರಿಕ ವರ್ಗಾವಣೆ ಕೇಂದ್ರಗಳ ಮುಖಾಂತರ ನವೀನ ತಂತ್ರಜ್ಞಾನಗಳ ಮಾಹಿತಿ ಪಡೆದು ಕೃಷಿ ಹಾಗು ಕೃಷಿಯೇತರ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಕೃಷಿಯನ್ನು ಲಾಭದಾಯಕವಾಗಿಸಲು ಸಾಧ್ಯವೆಂದು ತಿಳಿಸಿದರು. ತೋಟಗಾರಿಕೆ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಪಿ. ಆರ್. ಧರ್ಮಟ್ಟಿ ಸುಧಾರಿತ ಈರುಳ್ಳಿ ಬೇಸಾಯ ಕ್ರಮಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಎನ್. ಕೆ. ಬಿರಾದಾರಪಾಟೀಲ, ವಿಶೇಷ ಅಧಿಕಾರಿ(ಬೀಜ) ಇವರು ಬೀಜೋತ್ಪಾದನೆ ಮಹತ್ವ ಹಾಗೂ ಕೃಷಿಯನ್ನು ಉದ್ದಿಮೆಯಾಗಿ ಪರಿಗಣಿಸಿ ಹೆಚ್ಚಿನ ಲಾಭ ಗಳಿಸಲು ಸಾಧ್ಯ ಎಂದು ಪ್ರತಿಪಾದಿಸಿ ಕೃಷಿಯಿಂದ ವಿಮುಖರಾಗದಂತೆ ಸಲಹೆ ನೀಡಿದರು. ಇದಲ್ಲದೇ ಕೃಷಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಬೀಜೋತ್ಪಾದನೆ ಕೈಗೊಂಡು ಹೆಚ್ಚಿನ ಲಾಭ ಪಡೆಯಲು ಸೂಚಿಸಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್.ಎಂ. ಮಂಟೂರ ಇವರು ಕ್ಷೇತ್ರೋತ್ಸವ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಕೇಂದ್ರದ ಡಾ. ಉಮಾ ಎನ್. ಕುಲಕರ್ಣಿ ಇವರು ವಂದಿಸಿದರು. ಸದರಿ ಕ್ಷೇತ್ರೋತ್ಸವದಲ್ಲಿ 150 ಕ್ಕೂ ಹೆಚ್ಚು ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

## ಕೃಷಿ ಯಂತ್ರೋಪಕರಣಗಳ ಪ್ರದರ್ಶನ





ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಒಂದು ದಿನದ ಕೃಷಿ ಯಂತ್ರೋಪಕರಣಗಳ ಪ್ರದರ್ಶನವನ್ನು ಮಾರ್ಚ 25, 2015 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ. ಬಿ. ಎಮ್. ಖಾದಿ ಪ್ರದರ್ಶನವನ್ನು ಉದ್ಘಾಟಿಸಿ ವಿವಿಧ ಯಂತ್ರೋಪಕರಣಗಳ ಮಳಿಗೆಗಳನ್ನು ವೀಕ್ಷಿಸಿದರು. ಡಾ. ವ್ಹಿ. ಐ. ಬೆಣಗಿ, ವಿಸ್ತರಣಾ ನಿರ್ದೇಶಕರು, ಡಾ. ಎ. ಆರ್. ಅಳಗವಾಡಿ, ಡೀನ್(ಕೃಷಿ) ಹಾಗೂ ಡಾ. ಕೆ. ವಿ. ನಾಟಿಕರ, ವಿಸ್ತರಣಾ ಸಹ ನಿರ್ದೇಶಕರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸದರಿ ಪ್ರದರ್ಶನದಲ್ಲಿ ಬೆಂಗಳೂರು, ರಾಯಚೂರು, ಗದಗ, ಸವದತ್ತಿ, ಬೆಳಗಾವಿ, ಹುಬ್ಬಳ್ಳಿ ಹಾಗೂ ಧಾರವಾಡದಿಂದ 18 ವಿವಿಧ ಕೃಷಿ ಸಂಬಂಧಿತ ಉಪಕರಣಗಳ ತಯಾರಕರು ಹಾಗೂ ಮಾರಾಟಗಾರರು ಭಾಗವಹಿಸಿ ಕೃಷಿ ಯಂತ್ರೋಪಕರಣಗಳನ್ನು ಪ್ರದರ್ಶಿಸಿದರು. ಲೇಸರ್ ಲೆವೆಲರ್, ರೊಟೊವೆಟರ್, ಶ್ರಮ ಕಡಿಮೆಗೊಳಿಸುವ ಸಾಧನಗಳು, ವಿವಿಧ ಮಾದರಿಯ ಸೈಕಲ್ ವೀಡರ್, ರೆಂಟೆ, ಕುಂಟೆ, ಕೂರಿಗೆ, ನೇಗಿಲು, ಎಡೆ ಕುಂಟೆ, ಕೋನೊವೀಡರ್, ಎನ್‌ವಿರೋಫಿಟ್ ಒಲೆ, ಕಿರುಧಾನ್ಯಗಳ ಸಂಸ್ಕರಣ ಯಂತ್ರ, ಗೋವಿನಜೋಳ ಸುಲಿಯುವ ಯಂತ್ರಗಳನ್ನು ರೈತರಿಗೆ ಪ್ರದರ್ಶಿಸಲಾಯಿತು. ಲೇಸರ್ ಆಧಾರಿತ ಭೂಮಿ ಸಮತಟ್ಟುಗೊಳಿಸುವ ಯಂತ್ರದ ಪ್ರಾತ್ಯಕ್ಷಿಕೆ ಪ್ರದರ್ಶನದ ಆಕರ್ಷಣೆಯಾಗಿತ್ತು. ಧಾರವಾಡ, ಗದಗ, ಬೆಳಗಾವಿ ಮತ್ತು ಹಾವೇರಿ ಜಿಲ್ಲೆಯ ಗ್ರಾಮಗಳಿಂದ 600 ಕ್ಕೂ ಹೆಚ್ಚು ರೈತ, ರೈತ ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ಸಂಯೋಜಕರಾದ  ಡಾ. ಎಸ್. ಎಂ. ಮಂಟೂರ ಇವರು ಮುಂದಾಳತ್ವದಲ್ಲಿ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು.

## ಪ್ರಧಾನ ಮಂತ್ರಿಗಳ "ಮನ್ ಕಿ ಬಾತ್" ಬಾನುಲಿ ಆಲಿಕೆ ಮತ್ತು ಪ್ರಗತಿಪರ ರೈತ ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ಪರಸ್ಪರ ಸಂವಾದ ಕಾರ್ಯಕ್ರಮ




ಪ್ರಧಾನ ಮಂತ್ರಿಗಳ ಜನಪ್ರಿಯ ಕಾರ್ಯಕ್ರಮವಾದ **"ಮನ್ ಕಿ ಬಾತ್"** ನ 6 ನೇ ಆವೃತ್ತಿಯ ರೈತರ ಉದ್ದೇಶಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ಜಿಲ್ಲಾ ಮಟ್ಟದ ರೈತ ಹಾಗೂ ರೈತ ಮಹಿಳೆಯರಿಗೆ ವೇದಿಕೆಯನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಾರ್ಚ 22, 2015 ರಂದು ಬೆಳಗ್ಗೆ 11.00 ಗಂಟೆಗೆ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ 60 ಕ್ಕೂ ಹೆಚ್ಚು ರೈತರು ಭಾಗವಹಿಸಿ ಪ್ರಧಾನ ಮಂತ್ರಿಗಳ **"ಮನ್ ಕಿ ಬಾತ್"** ಬಾನುಲಿ ಕಾರ್ಯಕ್ರಮವನ್ನು ಆಲಿಸಿದರು. ಕಾರ್ಯಕ್ರಮದ ನಂತರ ರೈತರ ನಡುವೆ ಮಹತ್ವ ಪೂರ್ಣವಾದ ಚರ್ಚೆಗಳಾದವು. ಕೃಷಿ ವಿಜ್ಞಾನ ಕೇಂದ್ರದ ಈ ಅರಿವು ಮೂಡಿಸುವ ಕಾರ್ಯಕ್ರಮವು ಸಂಪೂರ್ಣವಾಗಿ ಚಿತ್ರೀಕರಣಗೊಂಡು ದೂರದರ್ಶನದ ಚಂದನವಾಹಿನಿಯಲ್ಲಿ ಪ್ರಸಾರವಾಯಿತು.



## ತರಬೇತಿಗಳು



ಬಿ.ಡಿ.ಎಸ್.ಎಸ್. ಸಂಸ್ಥೆಯ ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಗೆ "ಆದಾಯ ಉತ್ಪನ್ನ ಚಟುವಟಿಕೆಗಳು" ಕುರಿತು ತರಬೇತಿಯನ್ನು ಜನವರಿ 13, 2015 ರಂದು ಕೇಂದ್ರದ ಆವರಣದಲ್ಲಿ ಆಯೋಜಿಸಿತ್ತು. ತರಬೇತಿಯಲ್ಲಿ ಗ್ರಾಮೀಣ ಗೃಹ ವಿಜ್ಞಾನದ ಆಹಾರ ಮತ್ತು ಪೋಷಣೆ, ಕುಟುಂಬ ಸಂಪನ್ಮೂಲ ನಿರ್ವಹಣೆ, ಮಾನವ ಅಭಿವೃದ್ಧಿ ಹಾಗೂ ಉಡುಪು ಮತ್ತು ವಸ್ತ್ರವಿನ್ಯಾಸ ವಿಭಾಗಗಳ ತಜ್ಞರುಗಳಿಂದ ಆದಾಯ ಉತ್ಪನ್ನ ಚಟುವಟಿಕೆಗಳ ಕುರಿತು ಮಹಿಳೆಯರಿಗೆ ಮಾಹಿತಿ ಒದಗಿಸಲಾಯಿತು. ಕುಟುಂಬ ಸಂಪನ್ಮೂಲ ನಿರ್ವಹಣೆಯ ಪ್ರಾಧ್ಯಾಪಕರುಗಳಾದ ಡಾ. ರೇಣುಕಾ ಸಾಲುಂಕೆ ಇವರು ಡಿಟರ್ಜೆಂಟ್ ಪೌಡರ್ ಹಾಗೂ ಡಾ. ಗೀತಾ ಚಿಟಗುಬ್ಬಿ ಫಿನೈಲ್ ತಯಾರಿಕೆಯನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟರು. ಆಹಾರ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಪ್ಯಾಕೆಜಿಂಗ್ ಹಾಗೂ ಲೇಬಲಿಂಗ್ ಕುರಿತಂತೆ ಗೃಹ ವಿಜ್ಞಾನ ತಜ್ಞರಾದ ಡಾ. ಉಮಾ ಎನ್. ಕುಲಕರ್ಣಿ ವಿವರಿಸಿದರು. ಸದರಿ ಕಾರ್ಯಕ್ರಮದಲ್ಲಿ 25 ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿದ್ದು, ವಿವಿಧ ಚಟುವಟಿಕೆಗಳ ಕುರಿತು ವಿಸ್ತಾರವಾಗಿ ತಿಳಿಸಲಾಯಿತು.



ಮುಳಮುತ್ತಲ ಗ್ರಾಮದ ರೈತರ ತಾಕುಗಳಲ್ಲಿ ಕಡಲೆಯ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು. ಸದರಿ ಗ್ರಾಮದ ರೈತರಿಗೆ ಸಮಗ್ರ ಕಡಲೆ ಬೆಳೆಯ ಕೃಷಿ ಕುರಿತು ಹೊರ ಆವರಣ ತರಬೇತಿಯನ್ನು ಜನವರಿ 10, 2015 ರಂದು ಆಯೋಜಿಸಲಾಗಿತ್ತು. ಕೇಂದ್ರದ ತೋಟಗಾರಿಕೆ ತಜ್ಞರಾದ ಡಾ. ಎಸ್. ಎಂ. ಹಿರೇಮಠ ಇವರು ಹೊಸ ತಳಿಯಾದ ಜೆ.ಜಿ.–11 ಇದರ ಅಧಿಕ ಇಳುವರಿ ಹಾಗೂ ಸೊರಗು ರೋಗದ ನಿರ್ವಹಣೆಯ ಬಗ್ಗೆ ಹಾಗೂ ಕೀಟ ತಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಇವರು ಬೀಜೋಪಚಾರದ ಮಹತ್ವ ಮತ್ತು ಕಡಲೆ ಕಾಯಿ ಕೊರಕದ ನಿರ್ವಹಣೆ ಕುರಿತು ಸಮಗ್ರ ಮಾಹಿತಿ ನೀಡಿದರು.

## ರೈತರಿಗೆ ಕೃಷಿ ಶೈಕ್ಷಣಿಕ ಪ್ರವಾಸ








ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಿಲ್ಲೆಯ ಆಯ್ದ 10 ಪ್ರಗತಿಪರ ರೈತರಿಗೆ ಮಹಾರಾಷ್ಟ್ರ ರಾಜ್ಯದ ವಿವಿಧ ಸ್ಥಳಗಳಿಗೆ 10 ದಿನಗಳ ಕೃಷಿ ಶೈಕ್ಷಣಿಕ ಪ್ರವಾಸವನ್ನು ಫೆಬ್ರವರಿ 10 ರಿಂದ 19, 2015 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಮಹಾರಾಷ್ಟ್ರ ರಾಜ್ಯದ ವಿವಿಧ ವಿಶ್ವವಿದ್ಯಾಲಯ, ಕೃಷಿ ಸಂಶೋಧನಾ/ವಿಜ್ಞಾನ ಕೇಂದ್ರಗಳು, ಜಲಗಾಂವನ ಜೈನ್ ಇರಿಗೇಷನ್ ಸಿಸ್ಟಮ್, ಈರುಳ್ಳಿ ಶೇಖರಣಾ ಘಟಕ ಹಾಗೂ ಪ್ರಗತಿಪರ ರೈತರ ಕ್ಷೇತ್ರಗಳಿಗೆ ಮತ್ತು ಗೋವಾ ರಾಜ್ಯದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಸಂಶೋಧನಾ ತಾಕುಗಳಿಗೆ ಭೇಟಿ ನೀಡಿ ಸೂಕ್ತ ತಂತ್ರಜ್ಞಾನಗಳ ಮಾಹಿತಿ ಪಡೆದರು. ಸದರಿ ಪ್ರವಾಸದ ನೇತೃತ್ವವನ್ನು ಕೇಂದ್ರದ ಕ್ಷೇತ್ರ ವ್ಯವಸ್ಥಾಪಕರಾದ ಶ್ರೀ. ಸಿ.ಜೆ. ಕುಮಾರ ವಹಿಸಿದ್ದರು.

## ವಸ್ತುಪ್ರದರ್ಶನದಲ್ಲಿ ಪಾಲ್ಗೊಳ್ಳುವಿಕೆ





ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು ಇವರು ಜನವರಿ 17 ರಿಂದ 22, 2015 ರವರೆಗೆ ಆಯೋಜಿಸಿದ ಕೃಷಿ ಮೇಳದಲ್ಲಿ ಕೃಷಿ ವಿಶ್ವವಿದ್ಯಾಲಯ ವತಿಯಿಂದ ಕೃಷಿ ವಿಜ್ಞಾನ ಕೇಂದ್ರದ ಕೀಟ ತಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಶ್ರೀ. ಎಸ್. ಜಿ. ಭೂತಿ ಭಾಗವಹಿಸಿ ವಸ್ತುಪ್ರದರ್ಶನ ಏರ್ಪಡಿಸಿದ್ದರು.

## ಅತ್ಯುತ್ತಮ ಸಂಶೋಧನಾ ಭಿತ್ತಿಪತ್ರ ಪ್ರದರ್ಶನ ಪ್ರಶಸ್ತಿ



ರಾಜಸ್ಥಾನದ ಅಜಮೀರನಲ್ಲಿರುವ ಎನ್‌ಆರ್‌ಸಿಎಸ್‌ಎಸ್‌ನಲ್ಲಿ ಜನವರಿ 19 ರಿಂದ 20, 2015 ರವರೆಗೆ ಜರುಗಿದ 'ಹೈ–ಟೆಕ್ ಹಾರ್ಟಿಕಲ್ಚರ್ ಫಾರ್ ಎನ್‌ಹಾನ್ಸಿಂಗ್ ಪ್ರೊಡಕ್ಟಿವಿಟಿ, ಕ್ವಾಲಿಟಿ ಆ್ಯಂಡ್ ರೂರಲ್ ಪ್ರಾಸ್ಪಾರಿಟಿ' ಕುರಿತು ರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಂ. ಮಂಟೂರ ಅವರು ಪ್ರದರ್ಶಿಸಿದ "ಸಂರಕ್ಷಿತ ವಾತಾವರಣದಲ್ಲಿ ಬ್ರೊಕೋಲಿ ತರಕಾರಿ ಬೇಸಾಯ" ಎಂಬ ಸಂಶೋಧನಾ ಭಿತ್ತಿಪತ್ರಕ್ಕೆ ಅತ್ಯುತ್ತಮ ಭಿತ್ತಿಪತ್ರ ಪ್ರದರ್ಶನ ಪ್ರಶಸ್ತಿ ಪಡೆದರು. ಡಾ. ಎಸ್. ಎಂ. ಮಂಟೂರ ಅಧಿವೇಶನವೊಂದರ ಸಹ ಅಧ್ಯಕ್ಷತೆ ವಹಿಸಿದ್ದರಲ್ಲದೇ ಸಂರಕ್ಷಿತ ಬೇಸಾಯ ಹಾಗೂ ಧಾರವಾಡದಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಹೈಟೆಕ್ ತೋಟಗಾರಿಕೆ ಯೋಜನೆಯ ವಸ್ತು ಸ್ಥಿತಿ ಕುರಿತು ಪ್ರಧಾನ ಪ್ರಬಂಧ ಮಂಡಿಸಿದರು.

## ಅತ್ಯುತ್ತಮ ಪ್ರಕಟಣೆ ಪ್ರಶಸ್ತಿ



ಧಾರವಾಡ ಕೃ.ವಿ. ಕೇಂದ್ರದ ಡಾ. ಉಮಾ ಎನ್. ಕುಲಕರ್ಣಿ, ವಿಷಯ ತಜ್ಞರು (ಗೃಹ ವಿಜ್ಞಾನ) ಇವರಿಗೆ ಹಿಮಾಚಲ ಪ್ರದೇಶದ ಸೋಲನ್‌ನಿನ ನೌನಿ ಡಾ. ವೈ. ಎಸ್. ಪಾರ್ಮರ್ ತೋಟಗಾರಿಕೆ ಹಾಗೂ ಅರಣ್ಯ ವಿಶ್ವವಿದ್ಯಾಲಯವು ಆಹಾರ ತಾಂತ್ರಿಕತೆ, ಭಾಗ–1 ಮಣಿಪಾಲ ಗ್ಲೋಬಲ್ ಎಜುಕೇಷನ್ ಸರ್ವಿಸಸ್, ಮಣಿಪಾಲ ಪ್ರಕಟಿಸಿದ ಪಠ್ಯಪುಸ್ತಕಕ್ಕೆ ಫೆಬ್ರವರಿ 28, 2014 ರಂದು ಅತ್ಯುತ್ತಮ ಪ್ರಕಟಣೆ ಪ್ರಶಸ್ತಿ – 2014 ನೀಡಿದೆ.



## ಕೃಷಿ ವಿಜ್ಞಾನ ಕೇಂದ್ರದ ವಿವಿಧ ಘಟಕಗಳಿಗೆ ಗಣ್ಯರ ಭೇಟಿ ಹಾಗೂ ವಿಜ್ಞಾನಿಗಳೊಂದಿಗೆ ಚರ್ಚೆ



ಬೆಂಗಳೂರಿನ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಸ್ವಾಮೀಜಿಗಳು ತಮ್ಮ ಶಿಷ್ಯವೃಂದದೊಂದಿಗೆ ಜನವರಿ 31, 2015 ರಂದು ಭೇಟಿ ನೀಡಿದರು.



ಧಾರವಾಡ ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳಾದ ಡಾ. ಡಿ. ರಾಜಗೋಪಾಲ ಹಾಗೂ ಡಾ. ಯೋಗಿರಾಜ ಬಿ. ಪಾಟೀಲ ಫೆಬ್ರುವರಿ 9, 2015 ರಂದು ಭೇಟಿ ನೀಡಿದರು.



ಅಮೇರಿಕದ ಮಿಸ್ಸೌರಿ ವಿಶ್ವವಿದ್ಯಾಲಯದ ಅಂತರ್‌ರಾಷ್ಟ್ರೀಯ ಕೇಂದ್ರದ ನಿರ್ದೇಶಕ ಹಾಗೂ ವಿಜ್ಞಾನಿ ಡಾ. ಜೇಮ್ಸ್ ಸ್ಕಾಟ್ ಇವರು ಮಾರ್ಚ 31, 2015 ರಂದು ಭೇಟಿ ಇತ್ತರು.





ಹೈದರಾಬಾದಿನ ಭಾರತೀಯ ಸಿರಿಧಾನ್ಯ ಬೆಳೆಗಳ ಸಂಶೋಧನಾ ಸಂಸ್ಥೆಯ ವತಿಯಿಂದ ಕಲಘಟಗಿ ತಾಲೂಕಿನ ನೀರಸಾಗರ ಹಾಗೂ ಲಿಂಗನಕೊಪ್ಪ ಗ್ರಾಮಗಳಲ್ಲಿ ಕೈಗೊಂಡ ಹಿಂಗಾರು ಜೋಳದ ಪ್ರಾತ್ಯಕ್ಷಿಕೆ ತಾಕುಗಳಿಗೆ ಸಂಸ್ಥೆಯ ನಿರ್ದೇಶಕರಾದ ಡಾ. ಜೆ. ವಿ. ಪಾಟೀಲ ಹಾಗೂ ವಿಜ್ಞಾನಿಗಳಾದ ಡಾ. ವಿಲಾಸ ಎ. ಟೋಣಪಿ ಇವರುಗಳು ಫೆಬ್ರುವರಿ 13, 2015 ರಂದು ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು.

## ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆ ಪ್ರಾತ್ಯಕ್ಷಿಕೆ





ಕೇಂದ್ರದ ಕೃಷಿ ಹೊಂಡದ ಮೀನು ಸಾಕಾಣಿಕೆ ಪ್ರಾತ್ಯಕ್ಷಿಕೆ ಘಟಕದ ಮೀನು ಕೊಯ್ಲು ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ವಿ. ಐ. ಬೆಣಗಿ ಹಾಗೂ ವಿಸ್ತರಣಾ ಸಹ ನಿರ್ದೇಶಕರಾದ ಡಾ. ಕೆ. ವಿ. ನಾಟಿಕರ ಇವರು ಜನವರಿ 16, 2015 ರಂದು ನೆರವೇರಿಸಿದರು. ಸದರಿ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಮೀನು ತಜ್ಞರಾದ ಡಾ. ಕೆ. ವಿ. ಬಸವಕುಮಾರ ಕೃಷಿ ಹೊಂಡದಲ್ಲಿ ವೈಜ್ಞಾನಿಕ ಮೀನು ಸಾಕಾಣಿಕೆ ಕುರಿತು ರೈತ ಹಾಗೂ ರೈತ ಮಹಿಳೆಯರಿಗೆ ಮಾಹಿತಿ ನೀಡಿದರು.


**ಸಂಪಾದಕರು ಹಾಗೂ ಪ್ರಕಾಶಕರು** : ಡಾ. ಎಸ್. ಎಮ್. ಮಂಟೂರ
ಕಾರ್ಯಕ್ರಮ ಸಂಯೋಜಕರು, ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

**ಸಹ ಸಂಪಾದಕರು** : ಡಾ. ಎಸ್. ಎಮ್. ಹಿರೇಮಠ, ಡಾ. ಉಮಾ ಎನ್. ಕುಲಕರ್ಣಿ, ಡಾ. ಕೆ. ಪಿ. ಗುಂಡಣ್ಣವರ, ಶ್ರೀಮತಿ ಶೈಲಜಾ ಎನ್. ಗಲಗಲಿ, ಶ್ರೀ. ಸಿ. ಜೆ. ಕುಮಾರ

**ಅಕ್ಷರ ಜೋಡಣೆ ಮತ್ತು ವಿನ್ಯಾಸ** : ಶ್ರೀ ಉಳವಪ್ಪ ಶಿವೋಜಿ
ಡಿಟಿಪಿ, ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ


ಇಂದ, | ಗೆ, | ತೆರೆದ ಅಂಚೆ


**ಕಾರ್ಯಕ್ರಮ ಸಂಯೋಜಕರು**
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836–2444272
ಮಿಂಚಂಚೆ : pc_kvkd@rediffmail.com
ವೆಬ್‌ಸೈಟ್ : www.kvkdharwad.org
ಮೊಬೈಲ : 94484 95342


**ಉಚಿತ ಕೃಷಿ ಸಂದೇಶಗಳಿಗಾಗಿ ದೂರವಾಣಿ ಸಂಖ್ಯೆ:0836–2444272ಗೆ ಕರೆಮಾಡಿ / www.kvkdharwad.org ವೆಬ್‌ಸೈಟ್‌ನಿಂದ ನೋಂದಣಿ ಮಾಡಿ**

